## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ

## ಸ್ಪೆಷಲ್ ಕೇಸ್: 54/2019

ಪ್ರಾಸಾ- 20
ಚಾಸಾ- 21

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾಃ ಶಾಮ್ ಪ್ರಸಾದ್ ಶೆಟ್ಟಿ |
| ತಂದೆಯ ಹೆಸರು | : | ಕೆ. ಎನ್ ಮಹಾಬಲ ಶೆಟ್ಟಿ |
| ವಯಸ್ಸು | : | 59 ವರ್ಷ |
| ವೃತ್ತಿ | : | ವೈದ್ಯಾಧಿಕಾರಿಗಳು, ಜಯದೇವ ಆಸ್ಪತ್ರೆ, ಮೈಸೂರು. |
| ವಾಸ | : | ಮೈಸೂರು |

**ಸಾಕ್ಷಿಯನ್ನು ದಿನಾಂಕ 19-11-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**(ವಿಡಿಯೋ ಕಾನ್ಫರೆನ್ಸ್ ಮುಖಾಂತರ)**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**:

1. ನಾನು ಕಳೆದ 11 ವರ್ಷಗಳ ಕಾಲ ಮೈಸೂರಿನ ಜೆ. ಎಸ್. ಎಸ್ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ಮಾಡಿದ್ದೆ. ಈಗ ಮೂರು ತಿಂಗಳುಗಳಿಂದ ಜಯದೇವ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೇನೆ.

2. ದಿನಾಂಕ 21-10-2019 ರಂದು ಪ್ರಾಸಾ-1 ನನ್ನ ಆಸ್ಪತ್ರೆಗೆ ದಾಖಲಾಗಿದ್ದು ನಾನು ಅವರನ್ನು ಪರೀಕ್ಷಿಸಿದಾಗ ಅವರ ಎಡ ಎದೆ ಹಾಗೂ ಬಲ ಎದೆಯಲ್ಲಿ ಹಲವಾರು ಪೆಲೆಟ್ಸ್ ಗಳು ಇದ್ದವು. ಪ್ರಾಸಾ-1 ನಮ್ಮ ಆಸ್ಪತ್ರೆಗೆ ಬರುವ ಸಂದರ್ಭದಲ್ಲಿ ಸ್ಥಿರವಾಗಿದ್ದು , ಅರವನ್ನು ನಮ್ಮ ಆಸ್ಪತ್ರೆಯಲ್ಲಿ ಅವರ ಬಲಎದೆಯಿಂದ 5 ಪೆಲೆಟ್ಸ್ ಗಳನ್ನು ಹೋರತೆಗೆದು

ಅವರ ಎಡ ಎದೆಯಲ್ಲಿದ್ದ ದೊಡ್ಡ ಗಾಯಕ್ಕೆ ಚಿಕಿತ್ಸೆ ನೀಡಿರುತ್ತೇನೆ.

3. ದಿನಾಂಕ 01-11-2019 ರಂದು ಆತ ಗುಣಮುಖನಾದ ನಂತರ ಆತನನ್ನು ನಾವು discharge ಮಾಡಿದ್ದೇವೆ. ಈ ಬಗ್ಗೆ ನಾನು ಡಿಸ್ಚಾರ್ಜ್ ಸಮ್ಮರಿಯನ್ನು ನಮ್ಮ ಆಸ್ಪತ್ರೆಯಿಂದ ನೀಡಿದ್ದಾರೆ. ಈಗ ನಾನು ನೋಡುತ್ತಿರುವ ಡಿಸ್ಚಾರ್ಜ್ ಸಮ್ಮರಿ ನಾನು ನೀಡಿದ ಡಿಸ್ಚಾರ್ಜ್ ಸಮ್ಮರಿ ಆಗಿದ್ದು, ಅದನ್ನು ನಿಪಿ-25 ಎಂದು ಗುರುತಿಸಲಾಯಿತು.

**<u>ಪಾಟೀಸವಾಲು- 1 ರಿಂದ 4 ನೇ ಆರೋಪಿತರ ಪರವಾಗಿ ಶ್ರೀ. ಎ.ಜಿ.ಜಿ. ವಕೀಲರಿಂದ:</u>**

4. ಪ್ರಾಸಾ-1 ನಮ್ಮ ಬಳಿ ಬಂದಾಗ ಆತ ಮಾತನಾಡುತ್ತಿದ್ದನು. ಪ್ರಾಸಾ-1 ನನ್ನ ಬಳಿ ಬಂದಾಗ ಆತ ನೆಲದ ಕೆಳಗೆ ಬಿದ್ದಿದಾನೆಂದು ಹೇಳಿದ್ದರು. ಗುಂಡಿನ ಗಾಯಗಳು ಯಾರಿಂದ ಮತ್ತು ಹೇಗೆ ಆಯಿತು ಎಂದು ಪ್ರಾಸಾ-1 ನನ್ನ ಬಳಿ ಹೇಳಿರಲಿಲ್ಲ. ಪೆಲಟ್ಸ್ ಗಳು ಎದೆಯ ಕವಾಟೆಯಲ್ಲಿ ಇದ್ದವು ಒಳಗೆ ಹೋಗಿರಲಿಲ್ಲ. ಪ್ರಾಸಾ-1 ರವರ ಎದೆಯ ಎಡಭಾಗದಲ್ಲಿದ್ದ ಗಾಯ ಗುಂಡಿನ ಗಾಯ ಹೌದೋ ಇಲ್ಲವೋ ಎಂದು ನನಗೆ ಹೇಳಲಾಗುವುದಿಲ್ಲ. ಗನ್ ಶಾಟ್ ಅಲ್ಲದೆ ಬೇರೆ ರೀತಿಯಲ್ಲಿ ಬಿದ್ದರು ಸಹ ನಿಪಿ-25 ರಲ್ಲಿ ಉಲ್ಲೇಖಿಸಿದ ಗಾಯಗಳು ಆಗಬಹುದು. ಪ್ರಾಸಾ-1 ರವರ ಎದೆಯಲ್ಲಿ ಪೆಲೆಟ್ಸ್ ಗಳನ್ನು ತೆಗೆದ 6 entry wound ಗಳು ಇದ್ದವು. ನಾನು ಪೊಲೀಸರ ಕೋರಿಕೆಯ ಮೆರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರಾಸಾ-1 ರವರ ದೇಹದಲ್ಲಿ ಯಾವುದೇ ಪೆಲೆಟ್ಸ್ ಗಳು ಸಿಕ್ಕಿರಲಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ